# ದೇಶಪ್ರೇಮಿ ಯುವಕ

ಸ್ವಾತಂತ್ರ್ಯಪೂರ್ವದಲ್ಲಿ ನಡೆದ ಒಂದು ಘಟನೆ. ಇಂಗ್ಲೆಂಡಿನಲ್ಲಿ ಐಸಿಎಸ್ ಪರೀಕ್ಷೆ ಉತ್ತೀರ್ಣರಾದ ಭಾರತೀಯರಿಗೆ ಭಾರತ ದೇಶದಲ್ಲಿ ಸೇವೆಗೆ ಸೇರಬೇಕಾದರೆ ಒಂದು ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾದದ್ದು ಅವಶ್ಯಕವಾಗಿತ್ತು, ಆ ಪರೀಕ್ಷೆಯನ್ನು ಬರೆಯುತ್ತಿದ್ದ ಯುವಕನೊಬ್ಬ ಇದ್ದಕ್ಕಿದ್ದಂತೆ ಪರೀಕ್ಷಾ ಕೊಠಡಿಯಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಹೊರಬಂದ. ಕಾರಣವೇನೆಂದರೆ ಆ ಭಾಷಾ ಪರೀಕ್ಷೆಯಲ್ಲಿ ಆಂಗ್ಲ ಭಾಷೆಯಿಂದ ಮಾತೃಭಾಷೆಗೆ ಭಾಷಾಂತರಿಸುವ ಕೌಶಲ್ಯ ಪರೀಕ್ಷಿಸುವ ವಿಭಾಗದಲ್ಲಿ 'ಇಂಡಿಯನ್ ಸೋಲ್ಜರ್ಸ್ ಆರ್ ಜನರಲಿ ಇನ್‌ಎಫಿಷಿಯಂಟ್' ಅಂದರೆ 'ಸಾಮಾನ್ಯವಾಗಿ ಭಾರತೀಯ ಸೈನಿಕರು ಅಸಮರ್ಥರು' ಎಂದು ನೀಡಲಾಗಿತ್ತು.

ಮಹಾನ್ ದೇಶಭಕ್ತನಾದ ಆ ಯುವಕನು ಈ ಪ್ರಶ್ನೆ ನೀಡಿರುವುದನ್ನು ವಿರೋಧಿಸಿ ಪರೀಕ್ಷೆಯನ್ನು ಬಹಿಷ್ಕರಿಸಿ ಹೊರಬಂದಿದ್ದನು. ಸ್ಥಳದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳು ಆ ಪ್ರಶ್ನೆಗೆ ಉತ್ತರಿಸದಿದ್ದಲ್ಲಿ ಉನ್ನತ ಹುದ್ದೆ ನೀಡುವುದಿಲ್ಲವೆಂದು ಎಚ್ಚರಿಸಿದಾಗಲೂ ಸಹ ಆ ಯುವಕನು ಮಾತ್ರ ದೇಶಕ್ಕೆ ಅವಮಾನ ಮಾಡಿ ಪಡೆಯಬಹುದಾದ ಯಾವುದೇ ಹುದ್ದೆ ತನಗೆ ಬೇಡ ಮತ್ತು ದೇಶಕ್ಕಿಂತ ಹುದ್ದೆ ದೊಡ್ಡದಲ್ಲ ಎಂದು ಪ್ರತ್ಯುತ್ತರ ನೀಡಿ ಅಧಿಕಾರಿಯ ಬೆವರಿಳಿಸಿದನು.

ಈ ವೀರ ದೇಶಪ್ರೇಮಿ ಯುವಕನೇ ಮುಂದೆ ಭಾರತೀಯ ರಾಷ್ಟ್ರೀಯ ಸೇನೆ ಸ್ಥಾಪಿಸಿ, ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟ ಮಾಡಿದ ಸ್ವಾತಂತ್ರ್ಯ ಸೇನಾನಿ ಸುಭಾಷ್ ಚಂದ್ರ ಬೋಸ್.

**-ಪ.ನಾ.ಹಳ್ಳಿ.ಹರೀಶ್ ಕುಮಾರ್**



# ಢಣಢಣ ಘಂಟೆ ಬಾರಿಸಿತು!



ಢಣ ಢಣ ಘಂಟೆ ಬಾರಿಸಿತು
ಪಾಠ ಕಲಿಯುವ ಹೊತ್ತಾಯಿತು
ಹೋಗುವ ಶಾಲೆಗೆ ಒಳ್ಳೆ ದಾರಿಯ ಹಿಡಿದು
ಕೈ ಕೈ ಜೋಡಿಸಿ ಸಾಲಾಗಿ ನಡೆದು

ಕಲಿಯುವ ಕನ್ನಡದ ಅಕ್ಷರಮಾಲೆ
ಮುತ್ತಿನಂತ ಪದಗಳ ಸರಮಾಲೆ
ಕನ್ನಡವು ಇಂಪಾದ ಸವಿಗಾನ
ಅರಿತರೆ ಮೂಡುವುದು ಸುಜ್ಞಾನ

ಒಂದರಿಂದ ಹತ್ತರ ಮಗ್ಗಿ
ಕಲೆಯುವ ಓದಿ ಬರೆಯುತ ಹಿಗ್ಗಿ
ಕೂಡಿ ಕಳೆಯುವ ಲೆಕ್ಕ
ಅರಿತುಕೊಳ್ಳುವ ಪಕ್ಕ

ಮಾಡುತ ವಿಜ್ಞಾನದಲ್ಲಿ ಪ್ರಯೋಗ
ಕೊಂಡುಕೊಳ್ಳುವ ಅದರ ಉಪಯೋಗ
ಕೇಳುವ ನಮ್ಮ ನಾಡಿನ ಇತಿಹಾಸ
ಹೆಮ್ಮೆಯಿಂದ ಮಾಡುವ ಅಭ್ಯಾಸ

ಢಣ ಢಣ ಘಂಟೆ ಬಾರಿಸಿತು
ಆಟವಾಡುವ ಹೊತ್ತಾಯಿತು
ತೆರಳುವ ಮನೆಗೆ ಒಳ್ಳೆ ದಾರಿಯ ಹಿಡಿದು
ಕೈ ಕೈ ಜೋಡಿಸಿ ಸಾಲಾಗಿ ನಡೆದು

**-ವಿಜಯ್‌ಕುಮಾರ್ ಎಚ್. ಕೆ.,**
**ರಾಯಚೂರು**